

بسم اللهِ الرّحمٰن الرّحيم

# ತವಕ್ಕುಲ್ ಅಲಲ್ಲಾಹ್ ಕುರಿತು ಹಝ್ರತ್ ಮಸೀಹ್ ಮೌಊದ್(ಅ)ರ ಪವಿತ್ರ ಮಾದರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **25–09–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಕಳೆದ ಕೆಲವು ಖುತ್ಬಗಳಲ್ಲಿ ನಾನು ಹಝ್ರತ್ ಮುಹಮ್ಮದ್ ಪೈಗಂಬರ್[ಸ]ರ ಜೀವನ ಚರಿತ್ರೆಯಲ್ಲಿ 'ತವಕ್ಕುಲ್'ನ ಅತ್ಯುನ್ನತ ಪದವಿಯನ್ನು ವಿವರಿಸುತ್ತಿದ್ದೇನೆ.

ಈ ಯುಗದಲ್ಲಿ ನಬಿ[ಸ]ರ ಮಾದರಿಯನ್ನು ನಬಿ[ಸ]ರ ಸತ್ಯವಂತ ದಾಸರಾದ ಹಝ್ರತ್ ಮಸೀಹ್ ಮೌಊದ್[ಅ] ನಮಗಾಗಿ ಹೇಗೆ ವಿವರಿಸಿದ್ದಾರೆ, ಯಾವ ಬೋಧನೆಯನ್ನು ನೀಡಿದ್ದಾರೆ ಮತ್ತು ಅದನ್ನು ಹೇಗೆ ಪಾಲಿಸಿದ್ದಾರೆ? ಈ ಕುರಿತು ಇಂದು ನಾನು ಕೆಲವು ವಿಷಯಗಳನ್ನು ಹೇಳಲಿದ್ದೇನೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಯಾವುದಾದರೂ ಕಾರ್ಯವನ್ನು ಸಾಧಿಸಲು ಅಲ್ಲಾಹನು ನಿಗದಿಪಡಿಸಿರುವ ಸಾಧನಗಳನ್ನು ನಿಮ್ಮ ಕೈಲಾದಷ್ಟು ಒಟ್ಟುಗೂಡಿಸಿ, ನಂತರ ನೀವು ಸ್ವತಃ ಪ್ರಾರ್ಥನೆಗಳಲ್ಲಿ ಮಗ್ನರಾಗಿ, "ಹೇ ದೇವನೇ, ನೀನೇ ಇದರ ಅಂತ್ಯವನ್ನು ಉತ್ತಮಗೊಳಿಸು" ಎಂದು ಬೇಡುವುದೇ 'ತವಕ್ಕುಲ್' ಆಗಿದೆ. ಈ ಸಾಧನಗಳನ್ನು ಕೂಡ ನಾಶಮಾಡುವ ಮತ್ತು ಅಡಿಮೇಲು ಮಾಡುವಂತಹ ನೂರಾರು ಆಪತ್ತುಗಳು ಹಾಗೂ ಸಾವಿರಾರು ವಿಪತ್ತುಗಳಿವೆ, ಅವುಗಳ ಹಾವಳಿಯಿಂದ ನಮ್ಮನ್ನು ರಕ್ಷಿಸಿ ನಮ್ಮನ್ನು ನೈಜ ಯಶಸ್ಸು ಹಾಗೂ ಗುರಿಗೆ ಮುಟ್ಟಿಸು ಎಂದು ಅಲ್ಲಾಹನಲ್ಲಿ ಬೇಡಬೇಕು.

ಹುಝೂರ್ ಹೇಳಿದರು: ಮನುಷ್ಯನು ಸಾಧನಗಳನ್ನು ಬಳಸುತ್ತಾನೆ, ಆದರೆ ಅನೇಕ ವಿಪತ್ತುಗಳು ಬರುತ್ತವೆ, ಯಾವ ಸಾಧನಗಳ ಮೇಲೆ ನಾವು ಅವಲಂಬಿತರಾಗಿರುತ್ತೇವೋ ಅವುಗಳೇ ನಾಶವಾಗುವಂತಹ ಸಂದರ್ಭಗಳು ಸೃಷ್ಟಿಯಾಗಬಹುದು. ಆದ್ದರಿಂದ ಅಲ್ಲಾಹನು ನಮ್ಮನ್ನು ಇವುಗಳ ದುಷ್ಪರಿಣಾಮಗಳಿಂದ ರಕ್ಷಿಸಲಿಕ್ಕಾಗಿ ಅಲ್ಲಾಹನೊಡನೆ ಸಹಾಯ ಬೇಡಬೇಕು. ಹೀಗೆ ಮಾಡಿದರೆ ಮಾತ್ರ ಒಬ್ಬ ಸತ್ಯವಿಶ್ವಾಸಿ ಅಲ್ಲಾಹನ ಕೃಪೆಗಳನ್ನು ಪಡೆಯುವವನು ಆಗುತ್ತಾನೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಅಲ್ಲಾಹನೊಡನೆ ಸಂತೃಪ್ತನಾಗಲು ಎಲ್ಲರಿಗೂ ಸಾಧ್ಯವಿಲ್ಲ; ಇದು **ತವಕ್ಕುಲ್** ಮತ್ತು **ತಬತ್ತುಲ್** ಎಂದರೆ, ದೇವನತ್ತ ಸಂಪೂರ್ಣ ಗಮನ, ದೇವನಲ್ಲಿ ಸಂತೃಪ್ತಿ ಹಾಗೂ ದೇವನ ಇಚ್ಛೆಗೆ ಶರಣಾಗುವುದರ ಅತ್ಯುನ್ನತ ಪದವಿಯಾಗಿದೆ. ಅಲ್ಲಿಗೆ ತಲುಪಿದ ಮೇಲೆ ಮನುಷ್ಯನಿಗೆ ತನ್ನ (ಸೃಷ್ಟಿಕರ್ತನಾದ) ಒಡೆಯನ ಮೇಲೆ ಯಾವುದೇ ರೀತಿಯ ದೂರು ಅಥವಾ ಅಸಮಾಧಾನವಿರುವುದಿಲ್ಲ. ಅಲ್ಲಾಹನು ತನ್ನ ದಾಸನೊಂದಿಗೆ ಸಂಪ್ರೀತನಾಗುವುದು, ಆ ದಾಸನ ಪರಿಪೂರ್ಣ ಸತ್ಯತೆ, ನಿಷ್ಠೆ, ಅತ್ಯುನ್ನತ ಮಟ್ಟದ ಪಾವಿತ್ರ್ಯತೆ, ಪರಿಶುದ್ಧತೆ ಹಾಗೂ ಪರಿಪೂರ್ಣ ವಿಧೇಯತೆಯ ಮೇಲೆ ಅವಲಂಬಿತವಾಗಿರುತ್ತದೆ. ಇದರಿಂದ ತಿಳಿದುಬರುವುದೇನೆಂದರೆ, ದೇವನ ಕುರಿತು ಇರುವ ಅರಿವು ಮತ್ತು ಆಧ್ಯಾತ್ಮಿಕ ಪಯಣದ ಎಲ್ಲ ಹಂತಗಳನ್ನು ಸಹ ಸಹಾಬಿಯರು

ದಾಟಿದ್ದರು ಹಾಗೂ ಅಲ್ಲಾಹನೊಂದಿಗಿನ ಸಂಬಂಧ ಮತ್ತು ತವಕ್ಕುಲ್‌ನ ಎಂತಹ ಸ್ಥಾನವನ್ನು ಅವರು ಪಡೆದುಕೊಂಡಿದ್ದರು ಎಂದರೆ, ಅದನ್ನು ನಮಗಾಗಿ ಮಾದರಿಯನ್ನಾಗಿ ನಮ್ಮ ಮುಂದೆ ಇರಿಸಲಾಗಿದೆ.

ಹುಝೂರ್ ಹೇಳಿದರು: ಹಝ್ರತ್ ಮಸೀಹ್ ಮೌಊದ್[ಅ] ತಮ್ಮ ಅನುಯಾಯಿಗಳಿಗೆ ಸಂದರ್ಭಕ್ಕೆ ಅನುಸಾರವಾಗಿ ತವಕ್ಕುಲ್‌ನ ಉಪದೇಶ ನೀಡುತ್ತಲೇ ಇರುತ್ತಿದ್ದರು. ಹಝ್ರತ್ ಮಾಸ್ಟರ್ ನಝೀರ್ ಹುಸೇನ್ ಸಾಹಿಬ್[ರ] ವರದಿ ಮಾಡುತ್ತಾರೆ: ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ಹೇಳಿದರು – "ಅಲ್ಲಾಹನು ದುರ್ಬಲನೆಂದು ಭಾವಿಸಬೇಡಿ, ಅವನು ಮಹಾ ಶಕ್ತಿಶಾಲಿಯಾಗಿದ್ದಾನೆ, ಯಾವುದೇ ವಿಷಯದಲ್ಲಿ ಅವನ ಮೇಲೆ ಭರವಸೆ ಇಟ್ಟರೆ, ಅವನು ಖಂಡಿತವಾಗಿಯೂ ನಿಮಗೆ ಸಹಾಯ ಮಾಡುತ್ತಾನೆ. **'ವ ಮನ್ ಯತವಕ್ಕಲ್ ಅಲಲ್ಲಾಹಿ ಫಹುವ ಹಸ್‌ಬುಹೂ'** – 'ಯಾರು ಅಲ್ಲಾಹನ ಮೇಲೆ ಭರವಸೆ ಇಡುತ್ತಾನೋ, ಅವನಿಗೆ ಅಲ್ಲಾಹನು ಸಾಕು' ಎಂದು ಅಲ್ಲಾಹನು ಸ್ವತಃ ಹೇಳಿದ್ದಾನೆ."

ಪುಣ್ಯವಂತರ ಗುಣಗಳನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಒಂದು ಪದವಿ 'ತವಕ್ಕುಲ್'ನ ಪದವಿಯಾಗಿದೆ, ಅದರ ಮೇಲೆ ಅವರನ್ನು ಅತ್ಯಂತ ಸುದೃಢವಾಗಿ ನಿಲ್ಲಿಸಲಾಗುತ್ತದೆ ಮತ್ತು ಅವರನ್ನು ಹೊರತುಪಡಿಸಿ ಇತರರಿಗೆ ಆ ಶುದ್ಧ ಚಿಲುಮೆ ಖಂಡಿತವಾಗಿಯೂ ಲಭಿಸುವುದಿಲ್ಲ. ಅವರಿಗಾಗಿಯೇ ಅದನ್ನು ಮಧುರ ಹಾಗೂ ಅನುಕೂಲಕರವಾಗಿಸಲಾಗುತ್ತದೆ. ದೈವಿಕ ಅರಿವಿನ ಬೆಳಕು ಅವರನ್ನು ಎಷ್ಟು ದೃಢವಾಗಿ ಹಿಡಿದಿಟ್ಟುಕೊಳ್ಳುತ್ತದೆಂದರೆ, ಅವರು ಅನೇಕ ಬಾರಿ ವಿವಿಧ ರೀತಿಯ ನಿರ್ಗತಿಕ ಸ್ಥಿತಿಯಲ್ಲಿದ್ದರೂ ಮತ್ತು ಸಾಮಾನ್ಯ ಸಾಧನಸಾಮಗ್ರಿಗಳಿಂದ ಸಂಪೂರ್ಣವಾಗಿ ದೂರವಿದ್ದರೂ, ಎಂತಹ ಉಲ್ಲಾಸ ಮತ್ತು ಮನಃಶಾಂತಿಯಿಂದ ಜೀವಿಸುತ್ತಿರುತ್ತಾರೆಂದರೆ ಹಾಗೂ ಎಂತಹ ಸಂತೋಷದಿಂದ ತಮ್ಮ ದಿನಗಳನ್ನು ಕಳೆಯುತ್ತಿರುತ್ತಾರೆಂದರೆ, ಅವರ ಬಳಿ ಸಾವಿರಾರು ಖಜಾನೆಗಳಿವೆ ಎಂಬಂತೆ ಭಾಸವಾಗುತ್ತದೆ. ಅವರ ಮುಖಗಳಲ್ಲಿ ಸಿರಿವಂತಿಕೆಯ, ಅಂದರೆ ಶ್ರೀಮಂತಿಕೆಯ ತಾಜಾತನ ಗೋಚರಿಸುತ್ತದೆ ಮತ್ತು ಶ್ರೀಮಂತರಾಗಿರುವವರಲ್ಲಿ ಇರುವ ಸುದೃಢತೆ ಕಂಡುಬರುತ್ತದೆ. ಸಂಕಷ್ಟದ ಸ್ಥಿತಿಯಲ್ಲೂ ಪರಿಪೂರ್ಣವಾದ ಹೃದಯ ವಿಶಾಲತೆ ಹಾಗೂ ಸಂಪೂರ್ಣ ವಿಶ್ವಾಸವನ್ನು ತಮ್ಮ ಕೃಪಾಳುವಾದ ಒಡೆಯನ ಮೇಲಿಡುತ್ತಾರೆ.

ಹುಝೂರ್ ಹೇಳಿದರು: ಅಲ್ಲಾಹನೊಂದಿಗೆ ಸಂಬಂಧವಿದ್ದರೆ, ಅಂಥವರಿಗೆ ಕಷ್ಟಗಳು ಮತ್ತು ತೊಂದರೆಗಳಲ್ಲೂ ಅಲ್ಲಾಹನ ಮೇಲೆ ಭರವಸೆ ಇರುತ್ತದೆ. ಅವನಿಂದ ದೂರ ಹೋಗುವುದಿಲ್ಲ. ಏನಾಗುವುದೋ? ಇದು ಕೇವಲ ಪರೀಕ್ಷೆಯೋ ಅಥವಾ ಶಿಕ್ಷೆಯೋ? ಎಂಬ ಆಲೋಚನೆ ಅವರಿಗೆ ಬರುವುದಿಲ್ಲ. ಸಂಪೂರ್ಣ ಭರವಸೆ ಅಲ್ಲಾಹನ ಮೇಲಿದ್ದರೆ, ಅಲ್ಲಾಹನ ಹಕ್ಕುಗಳನ್ನು ಪೂರೈಸುತ್ತಿದ್ದರೆ, ಖಂಡಿತವಾಗಿಯೂ ಅಲ್ಲಾಹನು ಅನುಗ್ರಹಗಳನ್ನು ದಯಪಾಲಿಸುತ್ತಾನೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ತವಕ್ಕುಲ್ ಮಾಡುವವರು ಮತ್ತು ದೇವನತ್ತ ಬಾಗುವವರು ಎಂದಿಗೂ ನಾಶವಾಗುವುದಿಲ್ಲ. ಕೇವಲ ತನ್ನ ಪ್ರಯತ್ನಗಳಲ್ಲೇ ಮುಳುಗಿರುವ ವ್ಯಕ್ತಿಗೆ, ಅವಮಾನವಲ್ಲದೇ ಬೇರೇನು ಸಿಗಲು ಸಾಧ್ಯವಿಲ್ಲ. ಜಗತ್ತು ಸೃಷ್ಟಿಯಾದಾಗಿನಿಂದಲೂ, ಲೋಕವನ್ನು ತ್ಯಜಿಸುವವರು ಅದನ್ನು ಪಡೆಯುತ್ತಾರೆ ಮತ್ತು ಅದರ ಹಿಂದೆ ಓಡುವವರು ಅದರಿಂದ ವಂಚಿತರಾಗುತ್ತಾರೆ ಎಂಬ ದೇವನ ನಿಯಮವೇ ನಡೆದುಕೊಂಡು ಬರುತ್ತಿದೆ. ದೇವನೊಂದಿಗೆ ಸಂಬಂಧ ಹೊಂದಿರದವರು, ಕೆಲವು ದಿನಗಳ ಕಾಲ ವಂಚನೆ ಮತ್ತು ಮೋಸದಿಂದ ಏನಾದರೂ ಪಡೆದುಕೊಂಡರೂ, ಅದು ನಿರರ್ಥಕವಾಗಿದೆ. ಏಕೆಂದರೆ ಕೊನೆಗೆ ಅವರು ಕಠಿಣವಾದ ವೈಫಲ್ಯವನ್ನು ಎದುರಿಸಬೇಕಾಗುತ್ತದೆ. ದೀನಿನ ಮುಂದೆ ಲೌಕಿಕತೆಗೆ ಸ್ವಲ್ಪವೂ ಗಮನ ನೀಡದವರು ಇಸ್ಲಾಮಿನ ಪ್ರಕಾರ ಶ್ರೇಷ್ಠ ಜನರಾಗಿದ್ದಾರೆ.

ಹುಝೂರ್ ಹೇಳಿದರು: ದೇವನ ಮೇಲೆ ಭರವಸೆಯೇ ಇಲ್ಲದಿದ್ದರೆ ಮತ್ತು ದೀನಿಗೆ ಲೌಕಿಕತೆಗಿಂತ ಬೆಲೆ ನೀಡುವ ಕಲ್ಪನೆಯೇ ಇಲ್ಲದಿದ್ದರೆ, ಈ ನಂಬಿಕೆಗಳು ಮತ್ತು ಈಮಾನಿನ ದೌರ್ಬಲ್ಯವು ಅಂತಹ ವ್ಯಕ್ತಿಯನ್ನು ಪರಲೋಕದ ಅನುಗ್ರಹಗಳಿಂದಲೂ ವಂಚಿತನನ್ನಾಗಿ ಮಾಡುತ್ತದೆ. ಅಂಥವರು ಈ ಲೋಕವನ್ನೇ ಸರ್ವಸ್ವವೆಂದು ಭಾವಿಸಿದ್ದಾರೆ ಮತ್ತು ಅದನ್ನು ಪಡೆಯಲು

ಪ್ರಯತ್ನಿಸುತ್ತಿದ್ದಾರೆ. ಅದು ಕೆಲವರಿಗೆ ಸಿಕ್ಕಿತು, ಇನ್ನು ಕೆಲವರು ಅದನ್ನು ಪಡೆಯುವ ಪ್ರಯತ್ನದಲ್ಲೇ ವಿಫಲರಾಗಿ ಈ ಲೋಕದಿಂದ ನಿರ್ಗಮಿಸಿದರು. ಕೆಲವರಿಗೆ ಅದು ಸಿಕ್ಕಿದ ನಂತರ ಕಳೆದುಹೋಯಿತು, ಅನಂತರ ಲೌಕಿಕ ಯಾತನೆಯಲ್ಲಿ ಅವರು ಜೀವನ ಕಳೆದರು. ಅವರಿಗೆ ದೀನ್ ಅಥವಾ ಲೌಕಿಕತೆ ಎರಡೂ ಲಭಿಸಲಿಲ್ಲ. ಈ ಬಗ್ಗೆ ಕವಿಯೊಬ್ಬರು ಹೀಗೆ ಹೇಳಿದ್ದಾರೆ: **ನ ಖುದಾಹೀ ಮಿಲಾ ನ ವಿಸಾಲೆ ಸನಮ್ –** ದೇವನ ಭೇಟಿಯೂ ಲಭಿಸಲಿಲ್ಲ, ಪ್ರೇಯಸಿಯ ಮಿಲನವೂ ಆಗಲಿಲ್ಲ!.

ಹುಝೂರ್ ಹೇಳಿದರು: ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರ ಹೆಸರನ್ನೇ 'ಮುತವಕ್ಕಿಲ್' (ಅಲ್ಲಾಹನ ಮೇಲೆ ಭರವಸೆ ಇಡುವವನು) ಎಂದು ಇಟ್ಟಿದ್ದಾನೆ. ಅವರು ಹೇಳುತ್ತಾರೆ: "ಮಸೀಹನ ಆಗಮನದ ಚಿಹ್ನೆಯಾಗಿ, ಅವರು ಇಬ್ಬರು ದೇವದೂತರ ರೆಕ್ಕೆಗಳ ಮೇಲೆ ತನ್ನ ಅಂಗೈಗಳನ್ನು ಇಟ್ಟಿರುತ್ತಾರೆ ಎಂದು ಬರೆಯಲಾಗಿದೆ. ಇದು, ಬೌದ್ಧಿಕ ಜ್ಞಾನ (ಬುದ್ಧಿಪರವಾದ ಅರಿವು) ಮತ್ತು ಆಂತರಿಕ ಬೆಳಕನ್ನು ಪಡೆಯುವ ಸಾಧನವಾಗಿರುವ ಅವರ ಬಲಗೈ ಮತ್ತು ಎಡಗೈಯು ಸ್ವರ್ಗೀಯ ದೇವದೂತರ ಬೆಂಬಲದಲ್ಲಿರುತ್ತದೆ ಎಂಬುದರತ್ತ ಸಂಕೇತವಾಗಿದೆ. ಬೌದ್ಧಿಕ ಜ್ಞಾನ ಮತ್ತು ಆಂತರಿಕ ಬೆಳಕು ಹಾಗೂ ಧರ್ಮದ ಅರಿವಿನ ಮಾತುಗಳು ಈ ಮಾಧ್ಯಮದ ಮೂಲಕ, ಅಂದರೆ ದೇವದೂತರ ಸಹಾಯದಿಂದ ಅವರಿಗೆ ಲಭಿಸುವುದು. ಇಬ್ಬರು ದೇವದೂತರ ಮೇಲೆ ಕೈಗಳು ಇರಿಸುವುದರ ಅರ್ಥ ಇದಾಗಿದೆ. ಅವರ ಅರಿವು ದೇವದೂತರ ಸಹಾಯದಿಂದ ಆಗಿರುತ್ತದೆ. ಅವರು ಶಾಲೆ, ಪುಸ್ತಕಗಳು ಮತ್ತು ವಿದ್ವಾಂಸರಿಂದ ಅರಿವನ್ನು ಪಡಯದೇ ದೇವನಿಂದಲೇ ದೈವಿಕ ಜ್ಞಾನವನ್ನು ಪಡೆಯುವರು. ಅಂದರೆ ಅವರು ಕೇವಲ ದೇವನಿಂದಲೇ ಕಲಿಸಲ್ಪಡುವ ಜ್ಞಾನವನ್ನು ಪಡೆಯುವರು. ಅವರ ಜೀವನದ ಅಗತ್ಯಗಳ ನಿರ್ವಾಹಕ ಹಾಗೂ ಜವಾಬ್ದಾರಿಯನ್ನು ಹೊರುವವನು ಸಹ ದೇವನೇ ಆಗಿರುತ್ತಾನೆ." ಹತ್ತು ವರ್ಷಗಳ ಹಿಂದೆಯೇ ನನ್ನ ಬಗ್ಗೆ ಈ ದಿವ್ಯವಾಣಿ ಅವತೀರ್ಣವಾಗಿದೆ: **ಇನ್ನಕಾ ಬಿ ಅಲ್‌ಯುನಿನಾ ಸಮ್ಮೈತುಕಲ್ ಮುತವಕ್ಕಿಲ ವ ಅಲ್ಲಮ್‌ನಾಹು ಮಿಲ್ಲದುನ್ನಾ ಇಲ್‌ಮಾ**. ಅಂದರೆ "ನೀನು ನಮ್ಮ ಕಣ್ಣುಗಳ ಮುಂದಿರುವೆ. ನಾವು ನಿನ್ನ ಹೆಸರನ್ನು ಮುತವಕ್ಕಿಲ್ (ಭರವಸೆ ಇಡುವವನು) ಎಂದು ಇಟ್ಟಿರುತ್ತೇವೆ ಮತ್ತು ನಮ್ಮ ಕಡೆಯಿಂದ ಜ್ಞಾನವನ್ನು ಕಲಿಸಿರುತ್ತೇವೆ."

ದುಆ ಮತ್ತು ತವಕ್ಕುಲ್‌ನ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಎಲ್ಲ ಕಗ್ಗಂಟುಗಳು (ಸಂಕಷ್ಟಗಳು) ದುಆದಿಂದಲೇ ಬಗೆಹರಿಯುತ್ತವೆ. ನಮ್ಮ ಕೈಯಲ್ಲಿ ಯಾರಿಗಾದರೂ (ಅವರು ಶತ್ರುಗಳಾಗಿರಲಿ ಅಥವಾ ಮಿತ್ರರಾಗಿರಲಿ) ಒಳಿತು ಮಾಡಲಿಕ್ಕೆ ಇರುವ ಅಸ್ತ್ರ ದುಆ ಮಾತ್ರವಾಗಿದೆ; ಅದನ್ನು ದೇವನು ನಮಗೆ ನೀಡಿದ್ದಾನೆ. ನಮಗೆ ಕಪ್ಪನ್ನು ಬಿಳಿಯನ್ನಾಗಿಸಲು ಅಥವಾ ಬಿಳಿಯನ್ನು ಕಪ್ಪನ್ನಾಗಿಸಲು ಸಾಧ್ಯವಿಲ್ಲ. ದೇವನು ತನ್ನ ಕೃಪೆಯಿಂದ ನಮಗೆ ದಯಪಾಲಿಸುವುದನ್ನು ಹೊರತುಪಡಿಸಿ ನಮ್ಮ ಬಳಿ ಒಂದು ಕಣದಷ್ಟು ಕೂಡ ಏನೂ ಇಲ್ಲ.

ದುಆದ ಕಡೆಗೆ ಗಮನ ಸೆಳೆಯುತ್ತಾ ಮತ್ತು ಅಲ್ಲಾಹನ ಮೇಲೆ ಭರವಸೆ ಇರಿಸಲು ಉಪದೇಶಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಆತ್ಮದ ಸುಧಾರಣೆಗಾಗಿ, ಉತ್ತಮ ಅಂತ್ಯಕ್ಕಾಗಿ ಮತ್ತು ಸತ್ಕಾರ್ಯಗಳನ್ನು ಮಾಡುವ ಸೌಭಾಗ್ಯ ಪಡೆಯಲು ಎರಡನೇ ಆಯಾಮ ದುಆ ಆಗಿದೆ. ಇದರೊಂದಿಗೆ ಒಬ್ಬನು ಎಷ್ಟರ ಮಟ್ಟಿಗೆ ಅಲ್ಲಾಹನ ಮೇಲೆ ಭರವಸೆ ಮತ್ತು ವಿಶ್ವಾಸವನ್ನಿಡುತ್ತಾನೋ ಮತ್ತು ಆ ಮಾರ್ಗದಲ್ಲಿ ದಣಿವರಿಯದೆ ಹೆಜ್ಜೆ ಇಡುತ್ತಾನೋ, ಅಷ್ಟೇ ಉತ್ತಮ ಫಲಿತಾಂಶಗಳು ಮತ್ತು ಪ್ರತಿಫಲಗಳು ಲಭಿಸುತ್ತವೆ ಮತ್ತು ಎಲ್ಲ ಕಷ್ಟಗಳು ದೂರವಾಗುತ್ತವೆ. ದುಆ ಮಾಡುವವನು ತಖ್ವದ ಅತ್ಯುನ್ನತ ಸ್ಥಾನವನ್ನು ತಲುಪುತ್ತಾನೆ.

ಹಝ್ರತ್ ಮಸೀಹ್ ಮೌಊದ್(ಅ)ರ ತವಕ್ಕುಲ್‌ನ ಬಗ್ಗೆ ವಿವರಿಸುತ್ತಾ ಹಝ್ರತ್ ಶೇಖ್ ಯಅ್‌ಖೂಬ್ ಅಲಿ ಸಾಹಿಬ್ ಇರ್ಫಾನಿ(ರ) ಬರೆಯುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ) ಮೊಕದ್ದಮೆಗಳ ಸಿದ್ಧತೆಯಲ್ಲಿ ಪೂರ್ಣ ಪರಿಶ್ರಮ ಮತ್ತು ಪ್ರಯತ್ನವನ್ನು ಮಾಡುತ್ತಿದ್ದರೂ, ಅವುಗಳ ಮೇಲೆ ಎಂದಿಗೂ ಭರವಸೆ ಇಡುತ್ತಿರಲಿಲ್ಲ; ಬದಲಾಗಿ ದುಆ ಮಾಡುತ್ತಿದ್ದರು ಮತ್ತು ಸದಾ ದೇವನ ಅಸ್ತಿತ್ವವನ್ನೇ ತಮ್ಮ ಮುಂದಿರಿಸುತ್ತಿದ್ದರು. ಅವನೇ ಅವರ ಆರಾಧ್ಯ ಮತ್ತು ಗುರಿಯಾಗಿದ್ದನು ಹಾಗೂ ಅವನ ಮೇಲೆಯೇ ಅವರಿಗೆ ಭರವಸೆ ಮತ್ತು ನಂಬಿಕೆ ಇರುತ್ತಿತ್ತು.

ತಮ್ಮ ಓರ್ವ ನಿಷ್ಠಾವಂತರಿಗೆ ಹಝ್ರತ್ ಮಸೀಹ್ ಮೌಊದ್[ಅ] ನೀಡಿದ ಉಪದೇಶದ ಕುರಿತು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್[ರ] ವರದಿ ಮಾಡುತ್ತಾರೆ: ಫೈಝುಲ್ಲಾಹ್ ಚಕ್‌ನ ನಿವಾಸಿಯಾದ ಹಾಫಿಝ್ ನೂರ್ ಮುಹಮ್ಮದ್ ಸಾಹಿಬ್[ರ] ನನಗೆ ಬರಹದ ಮೂಲಕ ತಿಳಿಸಿದ್ದರು. 'ಯಾವುದಾದರೂ ಮೊಕದ್ದಮೆಗಾಗಿ ಅಥವಾ ಬೇರೆ ಯಾವುದೇ ಕಾರಣಕ್ಕಾಗಿ ಅಧಿಕಾರಿಯ ಮುಂದೆ ಹೋಗಬೇಕಾಗಿ ಬಂದರೆ, ಹೋಗುವ ಮುನ್ನ ಏಳು ಬಾರಿ ಸೂರತುಲ್ ಫಾತಿಹಾವನ್ನು ಓದಬೇಕು ಮತ್ತು ಏಳು ಬಾರಿ ತನ್ನ ಬೆರಳಿನಿಂದ ತನ್ನ ಹಣೆಯ ಮೇಲೆ **'ಯಾ ಅಝೀಝ್'** ಎಂದು ಬರೆದುಕೊಳ್ಳಬೇಕು. ಈ ರೀತಿ ಅಲ್ಲಾಹನು ಯಶಸ್ಸನ್ನು ನೀಡುತ್ತಾನೆ' ಎಂದು ಹಝ್ರತ್ ಮಸೀಹ್ ಮೌಊದ್[ಅ] ಹೇಳಿದ ಬಗ್ಗೆಗಿನ ಪ್ರಸ್ತಾಪವನ್ನು ನಾನು ಹಾಫಿಝ್ ಹಾಮಿದ್ ಅಲಿ ಸಾಹಿಬ್(ರ)ರಿಂದ ಕೇಳಿದ್ದೆ."
ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್[ರ] ಇದರ ಬಗ್ಗೆ ಪ್ರತಿಕ್ರಿಯಿಸುತ್ತಾ ಬರೆಯುತ್ತಾರೆ: "ದೇವನಲ್ಲದವರಿಂದ ಸಂಪೂರ್ಣವಾಗಿ ಬಿಟ್ಟುನಿಲ್ಲಲು ಮತ್ತು ಅಲ್ಲಾಹನ ಮೇಲಿನ ಭರವಸೆಯ ಸ್ಥಿತಿಯನ್ನು ಹುಟ್ಟುಹಾಕಲು ಹಝ್ರತ್ ಮಸೀಹ್ ಮೌಊದ್[ಅ] ಬಹುಶಃ ಹೀಗೆ ಹೇಳಿರಬಹುದು."
ಹುಝೂರ್ ಹೇಳಿದರು: ಹಝ್ರತ್ ಪೈಗಂಬರ್[ಸ]ರ ಅನುಸರಣೆಯಲ್ಲಿ ಹಝ್ರತ್ ಮಸೀಹ್ ಮೌಊದ್[ಅ]ರಿಗೆ ಅಲ್ಲಾಹನ ಮೇಲೆ ಇದ್ದ ಭರವಸೆಯ ಅದ್ಭುತವಾದ ಮಟ್ಟ ನಮಗೆ ಎಲ್ಲೆಡೆ ಗೋಚರವಾಗುತ್ತಿದೆ. ಅಲ್ಲಾಹನು ನಮಗೂ ತವಕ್ಕುಲ್‌ನ ಅತ್ಯುನ್ನತ ಮಟ್ಟವನ್ನು ಸಾಧಿಸುವ ಸೌಭಾಗ್ಯವನ್ನು ದಯಪಾಲಿಸಲಿ.

——————————*****——————————

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِی الْقُرْبٰی
وَيَنْهٰی عَنِ الْفَحْشَآءِ وَالْمُنْكَرِ وَالْبَغْیِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ۔


***Friday Sermon delivered by Hadrath Khaleefatul Masih Al Khamis****(atba)*
At, ***'Masjid Mubarak'****, Islamabad, Tilford,* U.K. On 25-09-2026
**Summarized by** *Majlis Ansarullah Bharat*
***Kannada Translation****:* Moulavi Inamullah for Kannada Desk, Qadian
***Reviewed by****:* M.P Ibrahim | ***Layout****:* Basheer K.P. Manjeshwar
***Published By****:* Kannada Isha'at Team for Nazarath Nashr-O-Isha'ath, Qadian
***Email****: khutuba.kannada@gmail.com*
**You can find all the Sermons archived at**: www.alislam.org/friday-sermon